# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ

ಸಿ ಸಿ ನಂಬರ 412/2024

| | | | |
|---|---|---|---|
| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |

ಸಾಕ್ಷಿದಾರರ ಹೆಸರು : ನಾಗರತ್ನ

ತಂದೆಯ ಹೆಸರು : ಬಸವರಾಜ ಮೇಟಿ

ವಯಸ್ಸು : 40 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 29.01.2025

ಉದ್ಯೋಗ : ಲೋಕಾಯುಕ್ತ ಪೋಲೀಸ ಠಾಣೆ

ವಾಸ ಸ್ಥಳ : ಕೊಪ್ಪಳ

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ಜೂಲೈ 2023 ರಿಂದ ಮಾರ್ಚ 2024 ರವರೆಗೆ ಹಲವಾಗಲು ಪೋಲೀಸ ಠಾಣೆ ಯಲ್ಲಿ ಪಿ ಎಸ್ ಐ ಅಂತಾ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 07.09.2023 ರಂದು ಮಧ್ಯಾಹ್ನ 2 ಗಂಟೆಗೆ ಪೋಲೀಸ ಠಾಣೆ ಯಲ್ಲಿ ಇರುವಾಗ ಬಾತ್ಮಿದಾರರಿಂದ ಮಾಹಿತಿ ಬಂದಿದ್ದು ಕಂಬಳಿ ವೆಂಕಟೇಶ್ ರವರ ಬೀಡಿ ಅಂಗಡಿಯ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಮಧ್ಯ ಮಾರಾಟ ಮಾಡುತ್ತಿದ್ದಾರೆಂದು ಮಾಹಿತಿ ಬಂದಿದ್ದು ಚಾ ಸಾ 4 ರಿಂದ 6 ರವರನ್ನು ಜೀಪಿನಲ್ಲಿ ಕರೆದುಕೂಂಡು ಹೋಗಿ 2.20 ಗಂಟೆಗೆ ಕುಂಚೂರು ಗ್ರಾಮವನ್ನು ತಲುಪಿ ಅಲ್ಲಿ ಪಂಚರಾದ ಚಾ ಸಾ 2 ಮತ್ತು 3 ರವರನ್ನು ಬರ ಮಾಡಿಕೊಂಡು ಅವರಿಗೆ ನೋಟೀಸು ನೀಡಿ ಅವರನ್ನು ಜೀಪಿನಲ್ಲಿ ಕರೆಸಿಕೊಂಡು ಇಟ್ಟಿಗುಡಿ ಅಲಗಿಲವಾಡ ಮೂಲಕ ದಾದಾಪುರ ಗ್ರಾಮದ ಬೀರ ಲಿಂಗೇಶ್ವರ ದೇವಸ್ಥಾನದ ಹತ್ತಿರ ಹೋಗಿ ಜೀಪನ್ನು ನಿಲ್ಲಿಸಿ ವೆಂಕಟೇಶ್ ರವರ ಅಂಗಡಿಯ ಹತ್ತಿರ ಸ್ವಲ್ಪ ದೂರದಲ್ಲಿ ಮರೆಯಾಗಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ಸಾರ್ವಜನಿಕ ಸ್ಥಳದಲ್ಲಿ ಮಧ್ಯ ಮಾರಾಟ ಮಾಡುತ್ತಿದ್ದರು. ನಾವೆಲ್ಲರೂ ಸೇರಿ ಅವನನ್ನು ಹಿಡಿದೆವು. ವಿಚಾರಿಸಿದಾಗ ಆತನ ತನ್ನ ಹೆಸರನ್ನು ಕಂಬಳಿ ವೆಂಕಟೇಶ್ ಅಂತಾ ಹೇಳಿರುತ್ತಾನೆ. ಆತನ ಬಳಿ ಪರವಾನಿಗೆ ಇರಲಿಲ್ಲ. ಆತನ ಅಂಗ ಶೋಧನೆ ಮಾಡಿದಾಗ 120 ರೂ ಹಣ 8 ಖಾಲಿ ಮಧ್ಯದ ಪೌಚ್ ಗಳು ಒಂದು ಪ್ಲಾಸ್ಟಿಕ್ ಚೀಲ ಇತ್ತು

ಸಿ ಸಿ ನಂಬರ 412/2024

| | | | |
|---|---|---|---|
| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |

ಅದರಲ್ಲಿ 90 ಎಂ ಎಲ್ ನ 12 ಟೆಟ್ರಾ ಪ್ಯಾಕ್ ಹೈವರ್ಡ್ಸ್ ಚಿಯರ್ಸ ವಿಸ್ಕಿ ದೊರೆಯಿತು. ಅದನ್ನು ಎಲ್ಲಾ ಜಪ್ತುಮಾಡಿ ಸೀಲ್ ಮಾಡಿ ಪಂಚರ ಸಮಕ್ಷಮ 3.30 ರಿಂದ 4.30 ರವರೆಗೆ ಸ್ಥಳ ಪಂಚನಾಮೆ ಜರೂಗಿಸಿರುತ್ತೇನೆ 5 ಗಂಟೆಗೆ ಪೋಲೀಸ ಠಾಣೆಗೆ ಹಿಂದಿರುಗಿ ಠಾಣಾಧಿಕಾರಿಗೆ ದೂರು ನೀಡಿರುತ್ತೇನೆ ಪಂಚನಾಮೆ ನಿ ಪಿ 1 ಎಂದು, ಸಾಕ್ಷಿ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ದೂರನ್ನು ನಿ ಪಿ 2 ಎಂದು, ಸಾಕ್ಷಿ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಅಮಾನತ್ತು ಪಡಿಸಿಕೊಂಡ ಮಾಲುಗಳನ್ನು ಗುರುತಿಸುತ್ತೇನೆ. 120 ರೂ ಹಣ ಮು ಮಾ1 ಎಂದು, 8 ಖಾಲಿ ಮಧ್ಯದ ಪೌಚ್ ಗಳು ಮತ್ತು 90 ಎಂ ಎಲ್ ನ 12 ಟೆಟ್ರಾ ಪ್ಯಾಕ್ ಹೈವರ್ಡ್ಸ್ ಚಿಯರ್ಸ ವಿಸ್ಕಿ ಒಟ್ಟಾರೆಯಾಗಿ ಮುಮಾ 2 ಎಂದು ಖಾಲಿ ಪ್ಲಾಸ್ಟಿಕ್ ಚೀಲವನ್ನು ಮು ಮಾ 3 ಅಂತಾ ಗುರುತಿಸಲಾಯಿತು. ಆರೋಪಿಯನ್ನು ಪುನಃ ನೋಡಿದರೆ ಗುರುತಿಸುತ್ತೇನೆ,

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಎ ಬಿ ಬಿ ವಕೀಲರಿಂದಃ-</u>**

ನಾವು ಪೋಲೀಸ ಠಾಣೆ ಬಿಟ್ಟಾಗ 2.10 ಆಗಿತ್ತು. ಘಟನಾ ಸ್ಥಳ ದಿಂದ ಪೋಲೀಸ ಠಾಣೆ 20 ಕಿ ಮೀ ಆಗುತ್ತದೆ. ಪಂಚರನ್ನು ಕುಂಚೂರು ಗ್ರಾಮ ದಿಂದ ಕರೆದುಕೊಂಡು ಹೋಗಿರುತ್ತೇವೆ. ಇಟ್ಟಿಗುಡಿ ಅಲಗಿಲವಾಡ ಮಾರ್ಗವಾಗಿ ದಾದಾಪುರ ಗ್ರಾಮಕ್ಕೆ ಹೋಗುವಾಗ ಕುಂಚೂರು ಬರುವುದಿಲ್ಲಾ ಎಂದರೆ ಸರಿಯಲ್ಲ. ಕುಂಚೂರು ರಸ್ತೆಯಲ್ಲಿ ಇದ್ದಂತಹ ಜನರಿಗೆ ಪಂಚರನ್ನಾಗಿ ಬರಮಾಡಿಕೊಂಡಿರುತ್ತೇವೆ. ಪಂಚರಿಗೆ ವಿಷಯ ತಿಳಿಸಲು 10 ನಿಮಿಷ ಆಯಿತು. ಘಟನಾ ಸ್ಥಳಕ್ಕೆ ಹೋದಾಗ 3 ಗಂಟೆ ಆಗಿತ್ತು. ಘಟನಾ ಸ್ಥಳ ಬಯಲು ಪ್ರದೇಶ ಎಂದರೆ ಓಣಿಯ ಜಾಗ ಇದೆ ಎನ್ನುತ್ತಾರೆ. ಆರೋಪಿ ಕಡೆಯಿಂದ ಸಾರ್ವಜನಿಕರು ಮಧ್ಯ ಖರೀದಿಸುತ್ತಿದ್ದರು. ಸಾರ್ವಜನಿಕರು

ಸಿ ಸಿ ನಂಬರ 412/2024

| | | | |
|---|---|---|---|
| ಸಿಡಬ್ಲ್ಯೂ | 1 | ಪಿಡಬ್ಲ್ಯೂ | 1 |

ಓಡಿ ಹೋದರು. ಅಂಗ ಶೋಧನೆ ಮಾಡುವ ಪೂರ್ವದಲ್ಲಿ ನಿಯಮ ಪಾಲಿಸಿಲ್ಲಾ ಎಂದರೆ ಸರಿಯಲ್ಲ. ಮುದ್ದೆ ಮಾಲಿನ ತಯಾರಿಕ, ದಿನಾಂಕ ಬ್ಯಾಚ್ ನಂಬರ ಪರಿಶೀಲನೆ ಮಾಡಿರುವುದಿಲ್ಲ. ನಾವು ದಾಳಿಗೆ ಹೋಗದ ಕಾರಣ ತಯಾರಿಕ, ದಿನಾಂಕ ಬ್ಯಾಚ್ ನಂಬರ ಪಂಚನಾಮೆಯಲ್ಲಿ ಬರೆದಿಲ್ಲಾ ಎಂದರೆ ಸರಿಯಲ್ಲ. ಪಂಚನಾಮೆ ಕಾಲದಲ್ಲಿ ಪೋಟೋ ತೆಗೆಯಲು ಇಲಾಖೆಯಿಂದ ಕ್ಯಾಮೇರಾ ನೀಡಿರುತ್ತಾರೆ ಎಂದರೆ ಸರಿ. ದಾಳಿಯ ಸಮಯದಲ್ಲಿ ನಾವು ಪೋಟೋ ತೆಗೆದಿರುವುದಿಲ್ಲಾ. ದಾಳಿಗೆ ಹೋಗದ ಕಾರಣ ಪೋಟೋ ತೆಗೆದಿಲ್ಲಾ ಎಂದರೆ ಸರಿಯಲ್ಲ. ಮು ಮಾ 2 ಸಾಮಾನ್ಯವಾಗಿ ಎಲ್ಲಾ ಮಧ್ಯದ ಅಂಗಡಿಯಲ್ಲಿ ಸಿಗುತ್ತದೆ ಎಂದರೆ ಸರಿ. ಮೇಲಾಧಿಕಾರಿಗಳ ಮಾತನ್ನು ಕೇಳಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸರಿಯಲ್ಲ. ಮು ಮಾ 1 ಆರೋಪಿಗೆ ಸಂಬಂಧ ಪಟ್ಟಿಲ್ಲಾ ಎಂದರೆ ಸರಿಯಲ್ಲ. ಮು ಮಾ 1 ರಿಂದ 3 ಆರೋಪಿಗೆ ಸಂಬಂಧಪಟ್ಟಿಲ್ಲಾ ಎಂದರೆ ಸರಿಯಲ್ಲ. ಆರೋಪಿ ರೈತಾಪಿ ಕೆಲಸ ಮಾಡುತ್ತಾರೆ ಎಂದರೆ ಬೀಡಿ ಅಂಗಡಿ ನಡೆಸುತ್ತಾರೆ. ಬೀಡಿ ಅಂಗಡಿಯ ಪರವಾನಿಗೆ ಪಡೆದು ಕಡತಕ್ಕೆ ಅಳವಡಿಸಿರುವುದಿಲ್ಲ. ಆರೋಪಿಗೂ ಹಾಗೂ ಮುದ್ದೆ ಮಾಲೀಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಬೀಡಿ ಅಂಗಡಿಯನ್ನು ನಡೆಸುತ್ತಿಲ್ಲಾ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.